<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.</u>

ಸಿ.ಸಿ.ನಂ.**374/2018**
ಸಿ.ಡಬ್ಲೂ:**05**
ಪಿ.ಡಬ್ಲೂ:**04**

| | |
|---|---|
| ಸಾಕ್ಷಿದಾರರ ಹೆಸರು | -ದಾವಲಸಾಬ ಬಂಕಲಗಿ |
| ತಂದೆಯ/ಗಂಡನ ಹೆಸರು | - ಚಾಂದಸಾಬ |
| ವಯಸ್ಸು | - 36 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸಸ್ಥಳ | - ಗೋಲಗೇರಿ |

<u>ಸಾಕ್ಷಿಯನ್ನು ದಿನಾಂಕ **12.02.2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>
<u>ಮುಖ್ಯ ವಿಚಾರಣೆ : ಎ.ಪಿ.ಪಿ. ರವರಿಂದ</u>

ನನಗೆ ಚಾ.ಸಾ.1,6 ರವರ ಪರಿಚಯವಿಲ್ಲ. ಚಾ.ಸಾ.2 ರಿಂದ 4 ಪರಿಚಯವಿದೆ. ಚಾ.ಸಾ.7 ರಿಂದ 17 ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿಲ್ಲ. ಆರೋಪಿಗೆ ಸೇರಿದ ಆಸ್ಪತ್ರೆಗೆ ಬಗ್ಗೆ ಮತ್ತು ಆತನ ಹತ್ತಿರ ಹೋಗಿ ಉಪಚಾರ ಪಡೆದುಕೊಂಡ ಬಗ್ಗೆ ಮತ್ತು ಪೋಲಿಸರು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ಶ್ರೀ : ಎ.ಪಿ.ಪಿ. ರವರಿಂದ</u>

ಆರೋಪಿಯು ತಾನು ಬಿ.ಎ.ಎಮ.ಎಸ್ ಪದವಿ ಪಡೆದು ವೈದ್ಯನಿರುತ್ತಾನೆ ದಾಖಲಾತಿಗಳನ್ನು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳ ವಿಜಯಪುರವರ ಕಡೆಗೆ ಸಲ್ಲಿಸಿದ್ದು ಅವರಿಂದ ಅನುಮತಿ ಪಡೆದು ತಾನು ಅಧಿಕೃತವಾಗಿ ಆಸ್ಪತ್ರೆ ನಡೆಸುತ್ತೇನೆ ಎಂದು ನಾನು ಚಾ.ಸಾ.6 ರವರ ಮನೆಯಲ್ಲಿ ತಿಂಗಳಿಗೆ 500 ರಿಂದ 1000/- ರೂಗಳಿಗೆ ಬಾಡಿಗೆ ಕೊಡುವುದಾಗಿ ತಿಳಿಸಿ ತನ್ನ ಅನುಕೂಲಕ್ಕೆ ಮಾಡಿಕೊಂಡು ಆಸ್ಪತ್ರೆ ನಡೆಸಲು ಎಲ್ಲಾ ತರಹದ ಸಾಮಾನುಗಳನ್ನು ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಹೀಗಿದ್ದು ದಿ: 19.02.2014 ರಂದು ಶ್ರೀ ಧನ್ವಂತರಿ ಕ್ಲಿನಕ್ ಎಂದು ಉದ್ಘಾಟನೆ ಸಮಾರಂಭವನ್ನು ಮಾಡಲು ಆಮಂತ್ರಣ ಪತ್ರಿಕೆ ಸಹ ಜನರಿಗೆ ನೀಡಿದ್ದ ಎಂದರೆ ಸರಿಯಲ್ಲ. ಹೀಗಿದ್ದು ದಿ: 18.02.2014 ರಂದು ಚಾ.ಸಾ.1 ರವರು ಗೋಲಗೇರಿ ಬಂದು ಆರೋಪಿಯು ಪ್ರಾಧಿಕಾರದಿಂದ ಯಾವುದೇ ಅನುಮತಿ

ಪಡೆಯದೇ ಆಸ್ಪತ್ರೆಯನ್ನು ಪ್ರಾರಂಬೀಸಿರುವುದು ಅಪರಾಧವಾಗಿರುತ್ತದೆ ಎಂದು ಆರೋಪಿಗೆ ನೋಟಿಸು ನೀಡಿ ಹೋದರು ಸಹ ಆರೋಪಿಯು ಯಾವುದೇ ನಿಯಮ ಪಾಲಿಸದೇ ದಿ: 19.02.2014 ರಂದು ಆಸ್ಪತ್ರೆಯನ್ನು ಉದ್ಘಾಟನೆ ಮಾಡಿ ಪ್ರಾರಂಭಿಸಿದಾಗ ಚಾ.ಸಾ.1 ರವರು ಬಂದು ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ ಖೊಟ್ಟಿ ದಾಖಲೆಗಳನ್ನು ತಯಾರಿಸಿ ಆರೋಪಿ ತಾನು ವೈದ್ಯನೆಂದು ಹೆಳಿಕೊಂಡು ಸಾರ್ವಜನಿಕರಿಗೆ ಮೋಸ ಮಾಡಿರುವಂತೆ ಆಸ್ಪತ್ರೆಯನ್ನು ಬಂದ ಮಾಡಲು ಆತನ ವಿರುದ್ಧ ಚಾ.ಸಾ.1 ರವರು ಪಿರ್ಯಾದಿ ನೀಡಿದ ಬಗ್ಗೆ ನಾನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ನಾನು ನಿ.ಪಿ.18 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ.

**( ಎ.ಆರ್.ಎ.ಮುಲ್ಲಾ)**
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಸಿಂದಗಿ.